
ಗೂಳಿಗಳನ್ನು ಕೇಳಿದಾಗ
ಅವರಿಗೀ ಸಮಸ್ಯೆಯೇ ಇಲ್ಲವಂತೆ.
ಇವುಗಳಿಗೆ ಪಿತಾಮಹರೊಡನೆ
ಹಿಂದೆಯೂ ಇರಲಿಲ್ಲ ಒಲವು.
ಎಮ್ಮೆಗಳನ್ನು ಕೇಳಿದಾಗ
ಇವರಿಗೆ ಕಪ್ಪು ಕೂಡ ಅಷ್ಟೇನು ಪ್ರಿಯವಾದುದಲ್ಲ.

ಸಾಯುವುದಾದರೆ ಇದೀಗ
ಆತ್ಮಹತ್ಯೆಯೇ ದಾರಿ.

ಬುಲ್ಗಾನ್ ಗಡ್ಡ ಇಟ್ಟುಕೊಂಡ
ಬುದ್ಧಿಜೀವಿ ಹೋತ ಕೇಳುತ್ತಿದೆ
ಮನುಷ್ಯರೆಲ್ಲರೂ ಸಮಾನರಾಗಿರದ ದೇಶದಲ್ಲಿ
ಮೃಗಗಳೆಲ್ಲವೂ ಸಮಾನವಾಗಿರಬಲ್ಲವೇ?



ಕಲೆ: ಬಸವರಾಜ ಎಸ್. ಕಲೆಗಾರ



# ಅಮ್ಮ ಮತ್ತು ಮಗು

'ಕೃಷ್ಣ ಮಣ್ಣು ತಿಂದ'
'ಅದ್ಯಾಕಮ್ಮಾ?'
'ಒಳಗೆ ಮಲಗಿರುವ ಲೋಕಗಳನ್ನು
ಅಮ್ಮನಿಗೆ ತೋರಿಸಲು'
'ಶಿವ ಕಾಳಕೂಟ ಕುಡಿದ'
'ಅದ್ಯಾಕಮ್ಮಾ?'
'ಈ ಲೋಕವನ್ನು ಕಾಯಲು'

'ಗೃಹಿಣಿ ವಿಷ ಸೇವಿಸಿದಳು'
'ಅದ್ಯಾಕಮ್ಮಾ?'
'ಒಳಗೆ ಉರಿಯುವ ನರಕಗಳನ್ನು
ಬಂಧು–ಬಳಗಕೆ ತೋರಿಸಲು'
'ಚೋಮ ನಿನ್ನೆ ಕೂಡ
ಹೆಂಡ ಕುಡಿದ'
'ಅದ್ಯಾಕಮ್ಮಾ?'
'ಈ ಲೋಕವನ್ನು ಮರೆಯಲು'

'ಬಾಯಾರುತ್ತಿದ್ದರೆ ತಾನೇ ಕುಡಿಯೋದು?
ಹಸಿವಾಗುತ್ತಿದ್ದರೆ ತಾನೇ ತಿನ್ನೋದು?'

'ದಾಹ ಹಲವು ಬಗೆ ಪುಟಾಣಿ
ಹಸಿವು ಹಲವು ಬಗೆ ಕಣ್ಮಣಿ'

●